

# ಸರಯೂ


ವಿದ್ಯಾಕೇಂದ್ರ ವಾರ್ತಾಪತ್ರ

SARAYU - Kannada Monthly   Regn. No. KARKAN/2014/62363
June Vol. : 11   Issue : 1   5126/ ಕ್ರೋಧಿ ಸಂವತ್ಸರ   ಜೂನ್ 2024   ಪುಟ 4   Rs. 10/-

Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24

## ಶ್ರೀರಾಮ ಪ್ರೌಢಶಾಲೆ ಕಲ್ಲಡ್ಕದ 2023-24ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾದ 285 ವಿದ್ಯಾರ್ಥಿಗಳಲ್ಲಿ 272 ವಿದ್ಯಾರ್ಥಿಗಳು ಉತ್ತೀರ್ಣರಾಗಿ 95.44% ಫಲಿತಾಂಶ ದಾಖಲಾಗಿರುತ್ತದೆ.

### ವಿಶಿಷ್ಟ ಶ್ರೇಣಿ ಪಡೆದ ವಿದ್ಯಾರ್ಥಿಗಳು



ಭೂಷಣ್ 617, ನಿಖಿತಾ 601, ಆಕಾಶ್ 598, ಶ್ರೀವಿದ್ಯಾ 587, ಚಂದ್ರಕಲಾ 585, ಯಶಸ್ವಿನಿ 579, ಶ್ರದ್ಧಾ 579, ಮೇಘಶ್ರೀ 579,
ಲಿಖಿತಾ 579, ಜಾಹ್ನವಿ 579, ಗಗನ್ 578, ದೀಶಾ 568, ಚೈತ್ರಲಕ್ಷ್ಮೀ 568, ಯತೇಶ್ 566, ವಿಂಧ್ಯಾ 566, ಪ್ರಜಸ್ವಿನಿ 566,
ದೀವಿಕಾ 566, ದೀವಿತ್ 562, ಹಂಸವಿ 559, ರಕ್ಷಿತಾ 558, ಯಜ್ಞೇಶ್ 554, ಮೋನಿಷಾ 554, ಕೃತಿಕಾ 554, ಗೌತಮ್ 550, ಗುರುಕುಮಾರ್ 550, ಅನುಷಾ 549,
ದುರ್ಗಾಶರಣ್ 547, ರೂಪಶ್ರೀ 546, ಚೇತನಾ 546, ಅನ್ವಿತಾ 545, ಧೃತಿ 543, ಸಹನಾ 542, ದಿವ್ಯಾ 541, ದೀಕ್ಷಾ ಡಿ. 541, ವಸುಪ್ರದಾ 540, ರಕ್ಷಿತ್ 536,
ಭವಿಶ್ 535, ಆದಿತ್ಯ ಮಲ್ಯ 534, ಸಾಗರ್ 532, ಮಾನ್ಯ 532, ಹರ್ಷ 531, ಆಕಾಶ್ 531

**125ರಲ್ಲಿ 125**
ಸಂಸ್ಕೃತ – 17
ಪ್ರ.ಕನ್ನಡ – 2

**100ರಲ್ಲಿ 100**
ತೃ.ಕನ್ನಡ – 9
ಹಿಂದಿ – 3
ಸಮಾಜ – 1

| 90%+ | 85%+ | 60%+ |
|---|---|---|
| 18 | 24 | 152 |

ಭೂಷಣ್ 617 ಅಂಕ ಪಡೆದು ಪ್ರಥಮ ಸ್ಥಾನ, ನಿಖಿತಾ 601 ಅಂಕ ಪಡೆದು ದ್ವಿತೀಯ ಸ್ಥಾನ, ಆಕಾಶ್ 598 ಅಂಕ ಪಡೆದು ತೃತೀಯ ಸ್ಥಾನ ಪಡೆದಿರುತ್ತಾರೆ.

42 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿ, 152 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, 64 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿ ಹಾಗೂ 14 ವಿದ್ಯಾರ್ಥಿಗಳು ತೃತೀಯ ಶ್ರೇಣಿ ಪಡೆದಿರುತ್ತಾರೆ.

ಸಂಸ್ಕೃತದಲ್ಲಿ 17 ವಿದ್ಯಾರ್ಥಿಗಳು, ಪ್ರಥಮ ಭಾಷೆ ಕನ್ನಡದಲ್ಲಿ 2 ವಿದ್ಯಾರ್ಥಿಗಳು 125 ರಲ್ಲಿ 125 ಅಂಕಗಳನ್ನು, ತೃತೀಯ ಕನ್ನಡದಲ್ಲಿ 9ಮಂದಿ ವಿದ್ಯಾರ್ಥಿಗಳು ಸಮಾಜದಲ್ಲಿ 1 ಮತ್ತು ಹಿಂದಿಯಲ್ಲಿ 3 ವಿದ್ಯಾರ್ಥಿಗಳು 100 ರಲ್ಲಿ 100 ಅಂಕಗಳನ್ನು ಪಡೆದಿರುತ್ತಾರೆ.

### ಕನ್ನಡ ಮಾಧ್ಯಮದಲ್ಲಿ ಬಂಟ್ವಾಳ ತಾಲೂಕಿಗೆ ಟಾಪರ್

ಕಲ್ಲಡ್ಕ ಶ್ರೀರಾಮ ಪ್ರೌಢಶಾಲೆಯ ಭೂಷಣ್ 617 (98.72%) ಅಂಕ ಗಳಿಸುವ ಮೂಲಕ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಬಂಟ್ವಾಳ ತಾಲೂಕಿಗೆ ಟಾಪರ್ ಆಗಿ ಹೊರಹೊಮ್ಮಿದ್ದಾನೆ. ದಕ್ಷಿಣ ಕನ್ನಡ ಜಿಲ್ಲೆಯ ಟಾಪ್ 10 ಅಂಕಗಳಿಸಿದ ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ಸಾಲಿಗೂ ಸೇರಿದ್ದಾನೆ.



## ಕಲ್ಲಡ್ಕ ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದಲ್ಲಿ ಪರಿಸರ ಸಂರಕ್ಷಣೆ ಕುರಿತಾದ ರಾಷ್ಟ್ರೀಯ ವಿಚಾರ ಸಂಕಿರಣ

# ಸ್ವಸ್ಥ ಭಾರತಕ್ಕಾಗಿ ಸ್ವಚ್ಛ ಪರಿಸರ

01.06.2024



ಡಾ. ತೇಜಸ್ವಿನಿ



ಡಾ. ಪ್ರಭಾಕರ ಭಟ್ ಕಲ್ಲಡ್ಕ



ಶ್ರೀ ಶಿವಾನಂದ ಕಳವೆ



ಡಾ. ಕೆ.ಆರ್ ಶ್ರೀಹರ್ಷ



ಡಾ. ನರೇಂದ್ರ ರೈ ದೇರ್ಲ



ಶ್ರೀ ವಸಂತ ಕಜೆ



ಶ್ರೀ ವೆಂಕಟೇಶ್ ಸಂಗನಾಳ



ಅಗ್ನಿಹೋತ್ರಕ್ಕೆ ಘೃತಾಹುತಿ ನೀಡಿ ಕಾರ್ಯಕ್ರಮದ ಉದ್ಘಾಟನೆ




ದೈನಂದಿನ ಪ್ರಾರ್ಥನೆ ಸರಸ್ವತಿ ವಂದನೆಯಲ್ಲಿ ಗಣ್ಯ ಅತಿಥಿಗಳು

* ವಿಚಾರಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಡಾ. ತೇಜಸ್ವಿನಿ ಅನಂತ್‌ಕುಮಾರ್ ಇವರು ದಿನಬಳಕೆಯ ಪ್ರತಿಯೊಂದು ವಸ್ತುವಿನ ಬಗ್ಗೆಯೂ ವಿಶೇಷ ಕಾಳಜಿ ವಹಿಸಿದರೆ ದೊಡ್ಡ ಪ್ರಮಾಣದ ಪರಿವರ್ತನೆಯನ್ನು ತರಬಹುದು. ಅದಕ್ಕಾಗಿ ತ್ಯಾಜ್ಯಮುಕ್ತ ಅಡುಗೆಮನೆಯಿಂದ ಈ ಕಾರ್ಯ ಆರಂಭವಾಗಬೇಕು ಹಾಗೂ ವಸ್ತುಗಳ ಮರುಬಳಕೆಯ ಬಗೆಗೆ ವಿಶೇಷ ಗಮನ ನೀಡಬೇಕು ಎಂದು ಹೇಳಿದರು.

* ಡಾ. ಪ್ರಭಾಕರ ಭಟ್ ಕಲ್ಲಡ್ಕ ಅವರು–ಪ್ರತಿಯೊಂದು ಜೀವಿಯೂ ಪ್ರಕೃತಿಯೊಂದಿಗೆ ಅವಿನಾಭಾವ ಸಂಬಂಧ ಹೊಂದಿದೆ. ಆದ್ದರಿಂದ ಪ್ರಕೃತಿಯೊಂದಿಗೆ ಬಾಳಬೇಕೇ ವಿನಃ ವ್ಯವಸ್ಥೆಯ ವಿರುದ್ಧ ಹೋದರೆ ಸರ್ವನಾಶ ನಿಶ್ಚಿತ ಎಂದರು.

"ಜಲ ಮತ್ತು ಮರ ಜಾಗೃತಿಯ ದೇಸಿ ದಾರಿ" ಎಂಬ ವಿಷಯದ ಕುರಿತು ಪರಿಸರ ಚಿಂತಕ ಮತ್ತು ಬರಹಗಾರ ಶ್ರೀ ಶಿವಾನಂದ ಕಳವೆಯವರು, "ಆರಾಧನೆ ಮತ್ತು ನಂಬಿಕೆಗಳಲ್ಲಿ ಪರಿಸರ ಉಳಿಕೆಯ ದೃಷ್ಟಿ" ವಿಷಯವನ್ನು ಪುತ್ತೂರಿನ ಸರಕಾರಿ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ. ನರೇಂದ್ರ ರೈ ದೇರ್ಲ, "ಸಮಗ್ರ ತ್ಯಾಜ್ಯ ನಿರ್ವಹಣೆ" ಕುರಿತು ನಿಕಟಪೂರ್ವ ಅಧ್ಯಕ್ಷರು, ಕರ್ನಾಟಕ ರಾಜ್ಯ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರ. ಬೆಂಗಳೂರು. ಡಾ| ಕೆ.ಆರ್. ಶ್ರೀಹರ್ಷ, ಸಾಫ್ಟ್‌ವೇರ್ ಎಂಜಿನಿಯರ್ ವೃತ್ತಿಯಲ್ಲಿದ್ದು ಪ್ರಸ್ತುತ ಪೂರ್ಣಾವಧಿ ಕೃಷಿಕರಾದ ಶ್ರೀ ವಸಂತ ಕಜೆಯವರು "ಮಣ್ಣು ಮತ್ತು ಆಹಾರ ವಿಷಮುಕ್ತವಾಗುವತ್ತ" ಎಂಬ ವಿಷಯವನ್ನು ಪ್ರಸ್ತುತಪಡಿಸಿದರು.

ಕೊನೆಯ ಗೋಷ್ಠಿಯಲ್ಲಿ ಪರ್ಯಾವರಣ ಸಂರಕ್ಷಣ ಗತಿವಿಧಿಯ ಪ್ರಾಂತ ಸಂಯೋಜಕ ಶ್ರೀ ವೆಂಕಟೇಶ್ ಸಂಗನಾಳ ಇವರು "ಪರಿಸರ ಸ್ನೇಹಿ ಜೀವನ ಪದ್ಧತಿ"ಯ ಬಗ್ಗೆ ವಿಷಯ ಮಂಡಿಸಿದರು. ಕು. ಗಾಯತ್ರೀ ಪರಿಸರದ ಕುರಿತಾದ ವೈಯಕ್ತಿಕ ಗೀತೆಯನ್ನು ಹಾಡಿದರು. ವಿದ್ಯಾರ್ಥಿಗಳು ಪರಿಸರ ಗೀತೆ, ಪ್ರದರ್ಶಿನಿಯನ್ನು ಆಯೋಜಿಸಿದ್ದರು.

**ಒಟ್ಟು 45 ವಿದ್ಯಾಸಂಸ್ಥೆಗಳಿಂದ 229 ಶಿಕ್ಷಕರು, 487 ವಿದ್ಯಾರ್ಥಿಗಳು, 51 ಇತರ ಪ್ರತಿನಿಧಿಗಳು ಸೇರಿ ಒಟ್ಟು 767 ಮಂದಿ ಭಾಗವಹಿಸಿದ್ದರು.**

## ಸುಭಾಷಿತ ಮಂಜರಿ

ಯಥಾ ದೇಶಸ್ತಥಾ ಭಾಷಾ (ವೇಶಃ)
ಯಥಾ ರಾಜಾ ತಥಾ ಪ್ರಜಾಃ ।
ಯಥಾ ಭೂಮಿಸ್ಥಥಾ ತೋಯಂ
ಯಥಾ ಬೀಜಂ ತಥಾऽಂಕುರಃ ॥

ದೇಶಕ್ಕೆ ತಕ್ಕಂತೆ ಭಾಷೆ (ವೇಷ),
ಅರಸನಂತೆ ಪ್ರಜೆ, ನೆಲದಂತೆ ಜಲ,
ಬೀಜದಂತೆ ಮೊಳಕೆ.

### ಸಂಪಾದಕೀಯ

ಸಾಮಾನ್ಯವಾಗಿ ಮೇ ತಿಂಗಳು ಶೈಕ್ಷಣಿಕವಾಗಿ ಅಷ್ಟೇನೂ ಚಟುವಟಿಕೆಗಳಿಲ್ಲದ ತಿಂಗಳಾದರೂ ವಿದ್ಯಾಸಂಸ್ಥೆಯ ವ್ಯವಸ್ಥೆಯಲ್ಲಿ ಪದವಿ ಕಾಲೇಜು ಕಾರ್ಯನಿರ್ವಹಿಸುವುದರಿಂದ ಪದವಿ ವಿಭಾಗದ ಎರಡು ಪ್ರಮುಖ ವರದಿಗಳೊಂದಿಗೆ (ಕಾಲೇಜು ವಾರ್ಷಿಕೋತ್ಸವ ಮತ್ತು ವಿಚಾರ ಸಂಕಿರಣ)ಈ ಸರಯು ಪ್ರಕಟಗೊಂಡಿದೆ. ಜೊತೆಗೆ ಬೇಸಿಗೆ ರಜೆಯಲ್ಲಿ ಅಧ್ಯಾಪಕರಿಗೆ ನಡೆಯುವ ವಿವಿಧ ತರಬೇತಿ ಕಾರ್ಯಗಾರಗಳು, ವಿಕಾಸ ವರ್ಗಗಳು ಮತ್ತು ಎಸ್.ಎಸ್.ಎಲ್.ಸಿ ಫಲಿತಾಂಶದೊಂದಿಗೆ ಸಂಚಿಕೆ ಹೊರಬಂದಿದೆ. 2022–23ನೇ ಶೈಕ್ಷಣಿಕ ವರ್ಷದಲ್ಲಿ ಆರಂಭಗೊಂಡ ಶ್ರೀರಾಮ ಸೆಕೆಂಡರಿ ಸ್ಕೂಲ್ ಆಂಗ್ಲ ಮಾಧ್ಯಮ ವಿಭಾಗವು 100% ಫಲಿತಾಂಶದೊಂದಿಗೆ ತನ್ನ ಮೊದಲ ಹೆಜ್ಜೆ ಇಟ್ಟಿದೆ. ಮಾರ್ಚ್ ತಿಂಗಳಲ್ಲಿ ಕಲ್ಲಡ್ಕದ ಶ್ರೀರಾಮ ಭಜನಾ ಮಂದಿರದಲ್ಲಿ ನಡೆದ ಶತಾಬ್ದಿ ಸಂಭ್ರಮದ ನಿಮಿತ್ತ ಶಾಲೆಯಲ್ಲಿ ನಡೆಸಲಾದ ರಾಮನಾಮ ತಾರಕ ಜಪ ಯಜ್ಞದ ವರದಿಯು ಇದೆ

ವಂದನೆಗಳೊಂದಿಗೆ

ಸಂಪಾದಕ ಬಳಗ


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಶ್ರೀಮತಿ (ಶಿಶುಮಂದಿರ)
ಚೈತ್ರಾ (ಪ್ರಾಥಮಿಕ ಶಾಲೆ)
ಮೇಘಶ್ರೀ (ಪ್ರೌಢಶಾಲೆ)
ಶ್ವೇತಾ (ಪಿಯುಸಿ)
ಸೌಮ್ಯ (ಸೆಕೆಂಡರಿ ಸ್ಕೂಲ್)
ಸಂಧ್ಯಾ (ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಟೂರು


## ಶಿಶುಮಂದಿರ

### ಶಾಲಾ ಪ್ರಾರಂಭೋತ್ಸವ 29.5.2024



2024–25ನೇ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋತ್ಸವದಲ್ಲಿ ಮಾತಾಜಿಯವರು ಪುಟಾಣಿಗಳಿಗೆ ಆರತಿ ಬೆಳಗಿ, ಅಕ್ಷತೆ ಹಾಕಿ, ತಿಲಕವಿಟ್ಟು, ಸಿಹಿ ನೀಡಿ ಪ್ರೀತಿಯಿಂದ ಬರಮಾಡಿಕೊಂಡರು. 100 ಪುಟಾಣಿಗಳು ಉಪಸ್ಥಿತರಿದ್ದರು.

## ಪ್ರಾಥಮಿಕ ಶಾಲೆ

### ಅಧ್ಯಾಪಕರ ಬೈಠಕ್ : 24.05.2024

2024–25ನೇ ಶೈಕ್ಷಣಿಕ ವರ್ಷದ ಮೊದಲ ಅಧ್ಯಾಪಕರ ಬೈಠಕ್ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಅವರ ಮಾರ್ಗದರ್ಶನದಲ್ಲಿ ನಡೆಯಿತು. ಈ ಬೈಠಕ್‌ನಲ್ಲಿ ತರಗತಿ ಹಂಚಿಕೆ ಹಾಗೂ ಜವಾಬ್ದಾರಿ ಹಂಚಿಕೆ ನಡೆಯಿತು.

### ಶಾಲಾ ಪ್ರಾರಂಭೋತ್ಸವ : 29.05.2024



2024–25ನೇ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋತ್ಸವ ನಡೆಯಿತು. ಶಾಲಾ ಸಂಸ್ಥಾಪಕರಾದ ಶ್ರೀಯುತ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಇವರು ಭಾರತಮಾತೆಗೆ ದೀಪ ಬೆಳಗಿಸಿ, ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಅಧ್ಯಾಪಕ ವೃಂದದವರು ಎಲ್ಲಾ ವಿದ್ಯಾರ್ಥಿಗಳಿಗೂ ಆರತಿ, ಅಕ್ಷತೆ ಹಾಕಿ, ತಿಲಕವಿಟ್ಟು, ಸಿಹಿ ನೀಡಿ ಆತ್ಮೀಯವಾಗಿ ಬರಮಾಡಿಕೊಂಡರು.

### ಹಿರಿಯರೊಂದಿಗೆ ಅಧ್ಯಾಪಕರ ಬೈಠಕ್ : 29.05.2024

ವೇದವ್ಯಾಸ ಧ್ಯಾನಮಂದಿರದಲ್ಲಿ ಹಿರಿಯರೊಂದಿಗೆ ಎಲ್ಲಾ ಅಧ್ಯಾಪಕರ ಬೈಠಕ್ ನಡೆಯಿತು. ಹಲವಾರು ವಿಷಯಗಳನ್ನು ಬೈಠಕ್‌ನಲ್ಲಿ ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಶಾಲಾ ಸಂಚಾಲಕರಾದ ಶ್ರೀ ವಸಂತ ಮಾಧವ ಹಾಗೂ ವಿಭಾಗ ಮುಖ್ಯಸ್ಥರು ಉಪಸ್ಥಿತರಿದ್ದರು.

### ಉಚಿತ ಪಠ್ಯಪುಸ್ತಕ, ನೋಟ್ ಪುಸ್ತಕ, ಸಮವಸ್ತ್ರ ವಿತರಣೆ: 29.05.2024



2024–25ನೇ ಶೈಕ್ಷಣಿಕ ವರ್ಷದ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯಪುಸ್ತಕ, ಬರೆಯುವ ಪುಸ್ತಕ ಹಾಗೂ ಸಮವಸ್ತ್ರವನ್ನು ಹಿರಿಯರ ಸಮ್ಮುಖದಲ್ಲಿ ವಿತರಿಸಲಾಯಿತು.

### ಶಾರೀರಿಕ ಶಿಕ್ಷಣ ಶಿಕ್ಷಕರ ತರಬೇತಿ : ಮೇ 31 ರಿಂದ ಜೂನ್ 2

ವಿದ್ಯಾಭಾರತಿ ಕರ್ನಾಟಕ, ಪ್ರಾಂತ ಶಾರೀರಿಕ ಶಿಕ್ಷಕರ ತರಬೇತಿ ಶಿಬಿರವು ಬೀದರ್‌ನಲ್ಲಿ ನಡೆಯಿತು. ಪ್ರಾಥಮಿಕ ವಿಭಾಗದ ಶಾರೀರಿಕ ಶಿಕ್ಷಣ ಶಿಕ್ಷಕರಾದ ಕು. ಯುಕ್ತಿಕಾರವರು ಈ ಶಿಬಿರದಲ್ಲಿ ಪಾಲ್ಗೊಂಡಿದ್ದರು.

## ಪ್ರೌಢಶಾಲೆ

### NCC ತರಬೇತಿ 22.05.2024



22.05.2024 ರಿಂದ 31.05.2024ರವರೆಗೆ MIT ಕ್ಯಾಂಪಸ್ ಮಣಿಪಾಲದಲ್ಲಿ ನಡೆದ NCC ತರಬೇತಿ ಶಿಬಿರದಲ್ಲಿ ಪ್ರೌಢಶಾಲೆಯ 42 ವಿದ್ಯಾರ್ಥಿಗಳು ಭಾಗವಹಿಸಿದರು.

## ವಿದ್ಯಾರ್ಥಿ ವೇತನಕ್ಕೆ ಆಯ್ಕೆ 25.05.2024



ಆದಿತ್ಯ ಎಸ್. ನಾಯಕ್ ಬ್ರಾಹ್ಮಿ ಲಿಪಿ

2023–24ನೇ ಸಾಲಿನ ಎನ್.ಎಂ.ಎಂ.ಎಸ್ ಪರೀಕ್ಷೆಯಲ್ಲಿ ಆದಿತ್ಯ ಎಸ್ ನಾಯಕ್, ಬ್ರಾಹ್ಮಿ ಮತ್ತು ಲಿಪಿ ಇವರು ರ್‍ಯಾಂಕ್ ಪಡೆದು ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾಗಿರುತ್ತಾರೆ.

## ಯೋಗ & ಸಂಸ್ಕಾರ ಕಾರ್ಯಾಗಾರ 27.5.24



ವಿವೇಕಾನಂದ ಸೆಂಟ್ರಲ್ ಸ್ಕೂಲ್ ಪುತ್ತೂರಿನಲ್ಲಿ ಸಂವಿತ್ ಸಂಶೋಧನಾ ಕೇಂದ್ರ ಬೆಂಗಳೂರು ಇದರ ಸಹಯೋಗದೊಂದಿಗೆ ಯೋಗ ಮತ್ತು ಸಂಸ್ಕಾರ ಕಾರ್ಯಾಗಾರವು ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇದರ ಆಡಳಿತಕ್ಕೆ ಒಳಪಟ್ಟ ಶಾಲೆಗಳ ಶಿಕ್ಷಕರಿಗೆ ದಿನಾಂಕ 27.5.24 ಮತ್ತು 28.05.24ರಂದು ನಡೆಯಿತು. ಇದರಲ್ಲಿ ಪ್ರೌಢಶಾಲೆಯ ಶಿಕ್ಷಕಿಯರಾದ ಶ್ರೀಮತಿ ವಿನುತಾ ಮಾತಾಜಿ ಮತ್ತು ಕುಮಾರಿ ದೀಕ್ಷಿತಾ ಮಾತಾಜಿ ಅವರು ಭಾಗವಹಿಸಿದ್ದರು.

## ಶಾಲಾ ಪ್ರಾರಂಭೋತ್ಸವ 29.05.2024



ಪ್ರೌಢಶಾಲೆಯ ಮಧುಕರ ಸಭಾಂಗಣದಲ್ಲಿ 2024–25 ನೇ ಸಾಲಿನ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮವು ಜರುಗಿತು. ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳು ಶ್ರೀರಾಮನಿಗೆ ಪುಷ್ಪಾರ್ಚನೆಯನ್ನು ಮಾಡಿದರು. ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿ ಸದಸ್ಯರಾದ ಶ್ರೀ ಅಜಿತ್ ಕುಮಾರ್, ಮಾತೃಭಾರತಿ ಸದಸ್ಯರಾದ ಶ್ರೀಮತಿ ಗುಲಾಬಿ, ಶ್ರೀಮತಿ ಹರಿಣಾಕ್ಷಿ, ಮತ್ತು ಶ್ರೀಮತಿ ರತ್ನ, ವಿದ್ಯಾಕೇಂದ್ರದ ಸಹಸಂಚಾಲಕರಾದ ಶ್ರೀ ರಮೇಶ್ ಶ್ರೀಮಾನ್ ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ್ ಶ್ರೀಮಾನ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಸಿಹಿ ಹಂಚಲಾಯಿತು. ರೇಷ್ಮಾ ನಿರೂಪಿಸಿ ಪ್ರಾಣೇಶ್ ಸ್ವಾಗತಿಸಿ, ಪ್ರೀತೇಶ್ ವಂದಿಸಿದರು.

## ಸ್ವಚ್ಛತಾ ಅಭಿಯಾನ ಕಾರ್ಯಕ್ರಮ 31.05.2024



ಶ್ರೀರಾಮ ಪ್ರೌಢಶಾಲೆಯಲ್ಲಿ ಸ್ವಚ್ಛ ಅಭಿಯಾನ ಕಾರ್ಯಕ್ರಮವು ನಡೆಯಿತು. ಪ್ರೌಢಶಾಲೆ ಎಲ್ಲಾ ವಿದ್ಯಾರ್ಥಿಗಳು ಸ್ವಚ್ಛ ಅಭಿಯಾನದಲ್ಲಿ ಶಾಲೆಯ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛಗೊಳಿಸಿದರು.

## ಪ್ರಾಂತಿಯ ಶಾರೀರಿಕ ಶಿಕ್ಷಣ ಶಿಕ್ಷಕರ ಕಾರ್ಯಾಗಾರ 31.5.24



ದಿನಾಂಕ 31.05.2024 ರಿಂದ 2.06.2024 ರವರೆಗೆ ಶ್ರೀ ಶಿವಯೋಗಿ ಸಿದ್ದವೀರ ಸ್ವಾಮಿ ಗುರುಕುಲ ಆಶ್ರಮ ತಾಡೋಳ ಬಸವಕಲ್ಯಾಣ ಬೀದರ್ ಇಲ್ಲಿ ಪ್ರಾಂತಿಯ ಶಾರೀರಿಕ ಶಿಕ್ಷಕರ ಕಾರ್ಯಾಗಾರ ನಡೆಯಿತು. ಈ ಕಾರ್ಯಾಗಾರದಲ್ಲಿ ಶ್ರೀರಾಮ ಪ್ರೌಢಶಾಲೆಯ ಶಾರೀರಿಕ ಶಿಕ್ಷಕರಾದ ಪುರುಷೋತ್ತಮ್ ಶ್ರೀಮಾನ್ ಹಾಗೂ ರಮ್ಯ ಮಾತಾಜಿ ಭಾಗವಹಿಸಿದ್ದರು.

# ಸೆಕೆಂಡರಿ ಸ್ಕೂಲ್

## ಶಾಲಾ ಪ್ರಾರಂಭೋತ್ಸವ 29.5.2024



ಶ್ರೀ ರಾಮ ಸೆಕೆಂಡರಿ ಸ್ಕೂಲ್‌ನಲ್ಲಿ 2024–25ನೇ ಸಾಲಿನ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋತ್ಸವ ನಡೆಯಿತು. ಶಾಲಾ ಸಂಚಾಲಕರಾದ ಶ್ರೀ ವಸಂತ ಮಾಧವ ಇವರು ಭಾರತ ಮಾತೆಗೆ ದೀಪ ಬೆಳಗಿಸಿ ಪುಷ್ಪಾರ್ಚನೆಗೈದು ನಂತರ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳು ಭಾರತಮಾತೆಗೆ ಪುಷ್ಪಾರ್ಚನೆಯನ್ನು ಮಾಡಿದರು. 9ನೇ ತರಗತಿಯ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕ ಹಾಗೂ ಸಮವಸ್ತ್ರವನ್ನು ವಿತರಿಸಲಾಯಿತು.

# ಪದವಿಪೂರ್ವ

## ದ್ವಿತೀಯ ಪಿಯುಸಿ ಪ್ರಾರಂಭೋತ್ಸವ 27.5.2024



ದ್ವಿತೀಯ ಪಿಯುಸಿಯ ಪ್ರಾರಂಭೋತ್ಸವ ಕಾರ‍್ಯಕ್ರಮದಲ್ಲಿ ವಿದ್ಯಾಭಾರತಿ ಕರ್ನಾಟಕ ಬೆಂಗಳೂರು ನಗರದ ಕೋಶಾಧಿಕಾರಿಗಳಾದ ಶ್ರೀ ಮಹೇಶ್ವರಪ್ಪ ಇವರು ದೀಪಪ್ರಜ್ವಲನೆ ಮಾಡಿದರು. ಪದವಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಕೃಷ್ಣಪ್ರಸಾದ್ ಉಪಸ್ಥಿತರಿದ್ದರು. ಎಲ್ಲಾ ಉಪನ್ಯಾಸಕ, ಉಪನ್ಯಾಸಕೇತರರು ಮತ್ತು ವಿದ್ಯಾರ್ಥಿಗಳು ಭಾರತಮಾತೆ ಭಾವಚಿತ್ರಕ್ಕೆ ಪುಷ್ಪಾರ್ಚನೆಗೈದರು.

**ವಾರ್ಷಿಕ ಪರೀಕ್ಷೆ– 2ಫಲಿತಾಂಶ**

ಪದವಿ ಪೂರ್ವ ಶಿಕ್ಷಣ ಇಲಾಖೆ ನಡೆಸಿದ 2024ನೇ ಸಾಲಿನ ದ್ವಿತೀಯ ಪಿಯುಸಿಯ ವಾರ್ಷಿಕ ಪರೀಕ್ಷೆ– 2 ರಲ್ಲಿ, ಪರೀಕ್ಷೆಗೆ ಹಾಜರಾದ 10 ವಿದ್ಯಾರ್ಥಿಗಳಲ್ಲಿ 5 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. ಫಲಿತಾಂಶವನ್ನು ಉತ್ತಮಪಡಿಸಿಕೊಳ್ಳಲು ಪರೀಕ್ಷೆ ಬರೆದ 20 ವಿದ್ಯಾರ್ಥಿಗಳಲ್ಲಿ 5 ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆ –1 ಕ್ಕಿಂತ ವಾರ್ಷಿಕ ಪರೀಕ್ಷೆ– 2ರಲ್ಲಿ ಹೆಚ್ಚು ಅಂಕ ಪಡೆದಿರುತ್ತಾರೆ.

**ಕಾರ್ಯಾಗಾರ 30.05.2024**

ಕೆನರಾ ಪದವಿ ಪೂರ್ವ ಕಾಲೇಜು ಮಂಗಳೂರು ದಕ್ಷಿಣ ಕನ್ನಡ ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಗಣಕಶಾಸ್ತ್ರ ಉಪನ್ಯಾಸಕರ ಸಂಘದ ಕಾರ್ಯಾಗಾರದಲ್ಲಿ ಕು.ಮಧುಶ್ರೀ ಅವರು ಭಾಗವಹಿಸಿರುತ್ತಾರೆ.

## ಪದವಿ

**ಪಾನೀಯ ಸ್ಪರ್ಧೆ 02.05.2024**



ಸಾಧನಾ ಸಭಾಂಗಣದಲ್ಲಿ ನಡೆದ ಪಾನೀಯ ಸ್ಪರ್ಧೆಯಲ್ಲಿ 6 ವಿದ್ಯಾರ್ಥಿಗಳ ತಂಡ ಭಾಗವಹಿಸಿ ಸುಮಾರು 16 ಬಗೆಯ ವಿವಿಧ ಆರೋಗ್ಯಯುತ ಪಾನೀಯ ತಯಾರಿಕೆ–ಯ ವಿಧಾನ ಮತ್ತು ಉಪಯೋಗವನ್ನು ವಿವರಿಸಿದರು. ಪ್ರಸನ್ನ ಮಾತಾಜಿ ನೇತೃತ್ವದಲ್ಲಿ ನಡೆದ ಈ ಸ್ಪರ್ಧೆಗೆ ರಶ್ಮಿತಾ ಮಾತಾಜಿ, ವಿನುತಲಕ್ಷ್ಮಿ ಮಾತಾಜಿ ಮತ್ತು ಯತಿರಾಜ್ ಶ್ರೀಮಾನ್ ತೀರ್ಪುಗಾರರಾಗಿ ಸಹಕರಿಸಿದರು.

**29.04.2024ರಿಂದ 06.05.24 ವರೆಗೆ On-line FDP ಕಾರ್ಯಾಗಾರದಲ್ಲಿ ಭಾಗಿ**

ಭಾರತೀಯ ಭಾಷಾ ಮಂಚ್ ಮತ್ತು ಶಿಕ್ಷಾ ಸಂಸ್ಕೃತಿ ಉತ್ಥಾನ ನ್ಯಾಸ್ ದಕ್ಷಿಣ ಪ್ರಾಂತ್ಯವು ಆಯೋಜಿಸಿದ್ದ ರಾಷ್ಟ್ರ ಮಟ್ಟದ " ದಕ್ಷಿಣ ಭಾರತದ ಭಾಷೆಗಳ ಮಹತ್ವ" ಕುರಿತಾದ 7 ದಿನದ Online FDP ಕಾರ್ಯಾಗಾರದಲ್ಲಿ ಶ್ರೀರಾಮ ಡಿಗ್ರಿ ಕಾಲೇಜಿನ ಪ್ರಾಂಶುಪಾಲ ಕೃಷ್ಣಪ್ರಸಾದ್, ಹಾಗೂ ಭಾಷಾ ವಿಭಾಗದ ಉಪನ್ಯಾಸಕರಾದ ಶ್ರೀದೇವಿ, ಧನಂಜಯ, ಯತಿರಾಜ್, ರಶ್ಮಿತಾ, ಪ್ರಸನ್ನಾ, ವಿಭಾನಿ ಇವರು ಭಾಗವಹಿಸಿದರು.

**ಕಾರ್ಯಾಗಾರ 2.05.2024**




ಪ್ರಬೋಧ ಕಾಮರ್ಸ್ ಕ್ಲಬ್ ಅಂತಿಮ ವರ್ಷದ ಬಿಕಾಂ ಮತ್ತು ಬಿಸಿಎ ವಿದ್ಯಾರ್ಥಿಗಳಿಗೆ "ಕ್ರಾಫ್ಟಿಂಗ್ ಆನ್ ಇಂಪ್ಯಾಕ್ಟ್‌ಫುಲ್ ಪ್ರೊಫೈಲ್" ಕಾರ್ಯಾಗಾರವನ್ನು ಆಯೋಜಿಸಿತು. ಚಾಣಕ್ಯ ವಿಶ್ವವಿದ್ಯಾನಿಲಯದ ಪ್ರೊ. ಸುರೇಶ್ ಮತ್ತು ಶ್ರೀ ವೆಂಕಟೇಶ್ ಇವರು ಅವಧಿ ನಡೆಸಿಕೊಟ್ಟರು. ವಾಣಿಜ್ಯ ವಿಭಾಗ ಮುಖ್ಯಸ್ಥರಾದ ಸುಕನ್ಯಾ ಮಾತಾಜಿ ಮತ್ತು ರಕ್ಷಾ ಮಾತಾಜಿ ಉಪಸ್ಥಿತರಿದ್ದರು. ಪೂಜಾಶ್ರೀ ನಿರ್ವಹಿಸಿದರು.

**ವಿಶ್ವ ರೆಡ್ ಕ್ರಾಸ್ ದಿನಾಚರಣೆ 08.05.2024**




ವಿಶ್ವ ರೆಡ್‌ಕ್ರಾಸ್ ದಿನದ ಪ್ರಯುಕ್ತ ಪದವಿ ಕಾಲೇಜಿನ ಯೂತ್ ರೆಡ್‌ಕ್ರಾಸ್ ಕ್ಲಬ್ ವತಿಯಿಂದ ವಿಶ್ವ ರೆಡ್‌ಕ್ರಾಸ್ ದಿನವನ್ನು ಆಚರಿಸಲಾಯಿತು. ಕಲಾ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಜಯಲಕ್ಷ್ಮಿ ಇವರು ದಿನದ ಮಹತ್ವವನ್ನು ತಿಳಿಸಿದರು. ಕನ್ನಡ ಉಪನ್ಯಾಸಕರಾದ ಶ್ರೀ ಯತಿರಾಜ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಕ್ಲಬ್‌ನ ನಿರ್ದೇಶಕಿ ಶ್ರೀದೇವಿ ಮಾತಾಜಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ಶ್ರೇಯಾ ವಂದಿಸಿ, ಆಕಾಶ್ ಸ್ವಾಗತಿಸಿ, ನಿರೂಪಿಸಿದರು.

**ಕಲಾರತ್ನ ಪ್ರಶಸ್ತಿ 08.05.2024**



Max life Insurance ಮತ್ತು Axis Bank ಕೊಡಲ್ಪಡುವ 2024 – Value Award Caremonyಯು ಇಂದು ಮಂಗಳೂರಿನಲ್ಲಿ ನಡೆದಿದ್ದು ನಮ್ಮ ಕಾಲೇಜಿನ ದ್ವಿತೀಯ ಬಿಸಿಎಯ ವಿದ್ಯಾರ್ಥಿ ಯತೀಶ್ ಆಚಾರ್ಯ ಇವರು ತಬಲ ನಾದನಕ್ಕೆ ಕಲಾರತ್ನ ಪ್ರಶಸ್ತಿಯನ್ನು ಪಡೆದುಕೊಂಡಿರುತ್ತಾರೆ.

**ರಾಷ್ಟ್ರೀಯ ಗೋಷ್ಠಿಯಲ್ಲಿ ಭಾಗಿ 11.05.2024**



ಶ್ರೀನಿವಾಸ್ ಯುನಿವರ್ಸಿಟಿ ಮುಕ್ಕ, ಸುರತ್ಕಲ್ ಇಲ್ಲಿನ ಶ್ರೀನಿವಾಸ್ ಯೋಗ ಮತ್ತು ಸಂಸ್ಕೃತ ಅಧ್ಯಯನ ಸಂಶೋಧನಾ ಕೇಂದ್ರವು ಆಯೋಜಿಸಿದ ಒಂದು ದಿನದ ರಾಷ್ಟ್ರೀಯ ಗೋಷ್ಠಿಯಲ್ಲಿ (National Conference)ನಲ್ಲಿ ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನ ಸಂಸ್ಕೃತ ಉಪನ್ಯಾಸಕಿ ಪ್ರಸನ್ನಾ ಇವರು ಭಾಗವಹಿಸಿ, "ಸಂಸ್ಕೃತ ಮತ್ತು ಮನಶ್ಶಾಸ್ತ್ರ" ಎಂಬ ವಿಷಯದ ಕುರಿತು ಪ್ರಬಂಧ ಮಂಡಿಸಿದರು.

**ವಿಶ್ವ ರೆಡ್‌ಕ್ರಾಸ್ ದಿನದ ಕಾರ್ಯಕ್ರಮದಲ್ಲಿ ಭಾಗಿ 08.05.2024**

ವಿಶ್ವ ರೆಡ್‌ಕ್ರಾಸ್ ದಿನದ ಪ್ರಯುಕ್ತ ಮಂಗಳೂರು ಯುನಿವರ್ಸಿಟಿ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ನಮ್ಮ ಕಾಲೇಜಿನ ದ್ವಿತೀಯ ಬಿಕಾಂ ವಿದ್ಯಾರ್ಥಿಗಳಾದ ಪುನೀತ್ ಕುಮಾರ್ ಹಾಗೂ ನಾಮ್‌ದೇವ್ ನಾಯಕ್ ಅವರು ಭಾಗವಹಿಸಿದರು.